(ಅ) ವಿಷಯ :- <u>ಬೆಂಗಳೂರಿನ ಬಸವೇಶ್ವರ ನಗರದ ವಸತಿ ಸೊಸೈಟಿಯಲ್ಲಿ ಕೋಟ್ಯಾಂತರ ರೂ. ಅವ್ಯವಹಾರ ಆಗಿರುವ ಕುರಿತು.</u>

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಡಿಟ್):- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಬಸವೇಶ್ವರ ನಗರದಲ್ಲಿ ಕೈಗಾರಿಕಾ ವಾರ್ಡ್‌ನಲ್ಲಿ ಸುಮಾರು 300 ಕೋಟಿ ರೂ. ಆಸ್ತಿ ಏನು ಕರ್ನಾಟಕ ಅರ್ಬನ್ ಹೌಸಿಂಗ್ ಸೊಸೈಟಿಯ ಸದಸ್ಯರಿಗೆ ನಿವೇಶನಗಳು ದೊರಕಬೇಕಾಗಿತ್ತು, ಅದನ್ನು ಇವತ್ತು ಅಲ್ಲಿನ ಸ್ಥಳೀಯ ಪೋಲಿಸ್ ಅಧಿಕಾರಿ ACP K.V.K. ರೆಡ್ಡಿ ಎನ್ನತಕ್ಕಂತಹವರು ಮತ್ತು ರಿಜಿಸ್ಟ್ರಾರ್ ಆಫೀಸಿನ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇವತ್ತು ಏನು ನನಗೆ ಸರ್ಕಾರದಿಂದ ಉತ್ತರ ಕೊಟ್ಟಿದ್ದೀರಾ, ಸುಮಾರು 35 ವರ್ಷಗಳಿಂದ ಈ ಹೌಸಿಂಗ್ ಸೊಸೈಟಿ ಇತ್ತು. ಹೌಸಿಂಗ್ ಸೊಸೈಟಿಯಲ್ಲಿ ಸದಸ್ಯರು ಬಹಳಷ್ಟು ಕಷ್ಟಪಟ್ಟು ಸದಸ್ಯರು ಹಣವನ್ನು ಹೂಡಿದ್ದರು. ಆ ಹಣವನ್ನು ಹೂಡಿದ ಸದಸ್ಯರಿಗೆ ನಿವೇಶನಗಳನ್ನು ನೀಡದೆ,

ಅಧ್ಯಕ್ಷರು :- ನರೇಂದ್ರ ಬಾಬುರವರೇ ಗಮನ ಸೆಳೆಯಿರಿ. ಮಂತ್ರಿಗಳು ಉತ್ತರ ಕೊಟ್ಟಮೇಲೆ ಸ್ಪಷ್ಟೀಕರಣ ಕೇಳಿ.

ಶ್ರೀ ಲಕ್ಷ್ಮಣ ಎಸ್. ಸವದಿ (ಸಹಕಾರ ಸಚಿವರು) :- ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ನೆ.ಲ. ನರೇಂದ್ರಬಾಬು ರವರು ನಿಯಮ 73 ರಡಿಯಲ್ಲಿ (ಬೆಂಗಳೂರಿನ ಬಸವೇಶ್ವರನಗರ ಕರ್ನಾಟಕ ನಗರ ವಸತಿ ಸೊಸೈಟಿಯಲ್ಲಿ (ಕೈಗಾರಿಕಾವಾರು) ಸಾವಿರಾರು ಕೋಟಿ ರೂಪಾಯಿ ಬೆಲೆ ಬಾಳುವ ನಿವೇಶನ ಗಳನ್ನು ಎಸ್.ಆರ್.ಸಿ.ಎಸ್. ರವರ ಮತ್ತು ಹೈಕೋರ್ಟ್‌ನ ಆದೇಶ ಇದ್ದರು, ಸೊಸೈಟಿಯ ಸದಸ್ಯರಲ್ಲದವರಿಗೆ ಈ ನಿವೇಶನಗಳನ್ನು ಕಾನೂನು ಬಾಹಿರವಾಗಿ ಹಂಚಿಕೆ ಮಾಡಿ ನಿಜವಾದ ಸದಸ್ಯರಿಗೆ ವಂಚನೆ ಆಗಿರುವುದಲ್ಲದೆ, ಅದಕ್ಕೆ ಪೂರಕವಾಗಿ ನಿಂತಿರುವ ಸಹಕಾರ ಇಲಾಖೆ ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳು ಇದರಲ್ಲಿ ಶಾಮೀಲಾಗಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಮಾನ್ಯ ವಿಧಾನ ಸಭಾ ಸದಸ್ಯರು ಮೇಲಿನ ಗಮನ ಸೆಳೆಯುವ ಸೂಚನೆಯಲ್ಲಿ ಕೇಳಿರುವ ಬೆಂಗಳೂರಿನ ಬಸವೇಶ್ವರ ನಗರ, " ಕರ್ನಾಟಕ ನಗರ ವಸತಿ ಸೊಸೈಟಿ" (ಕೈಗಾರಿಕಾವಾರು)" ಎಂಬ ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಹಾಗೂ ನಿಯಮಗಳು 1960 ರಡಿಯಲ್ಲಿ ನೋಂದಣಿಯಾಗಿರುವುದಿಲ್ಲ. ಅಲ್ಲದೆ "ಕೈಗಾರಿಕಾವಾರು" ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಕಂಡುಬರುವುದಿಲ್ಲ.

ಆದಾಗ್ಯೂ, ಈ ಗಮನ ಸೆಳೆಯುವ ಸೂಚನೆಯು, ಬೆಂಗಳೂರು ನಗರದ ಬಸವೇಶ್ವರ ನಗರದಲ್ಲಿ ಬಡಾವಣೆ ರಚಿಸಿರುವ "ಕರ್ನಾಟಕ ಅರ್ಬನ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ನಿ," ಬೆಂಗಳೂರು ಎಂದು ಭಾವಿಸಿ, ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960 ರಡಿಯಲ್ಲಿ ದಿನಾಂಕ : 18-07-73 ರಂದು ನೋಂದಣಿಯಾಗಿದ್ದು, ಇದರ ಕಾರ್ಯವ್ಯಾಪ್ತಿಯು ಬೆಂಗಳೂರು ನಗರದ ಗುಡ್ಡದಹಳ್ಳಿ, ರಾಜಾಜಿನಗರದ 5 ನೇ ಮತ್ತು 6 ನೇ ಬ್ಲಾಕ್‌ಗೆ ಸೀಮಿತವಾಗಿರುತ್ತದೆ. ಈ ಸಂಘದ ಹಾಲಿ ವಿಳಾಸ ಸಂ:276, 12 ನೇ -ಎ ಮುಖ್ಯ ರಸ್ತೆ, 6 ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಆಗಿರುತ್ತದೆ.

ಸದರಿ ಸಂಘವು ಬೆಂಗಳೂರು ಉತ್ತರ ತಾ: ಯಶವಂತಪುರ ಹೋಬಳಿ, ಅಗ್ರಹಾರ ದಾಸರಹಳ್ಳಿಯ ಸರ್ವೆ ನಂ: 60/1, 61/1 ಮತ್ತು 69/2 ರಲ್ಲಿ ಒಟ್ಟು 8 ಎಕರೆ 30 ಗುಂಟೆ ಜಮೀನಿನಲ್ಲಿ ಬಡಾವಣೆಯನ್ನು ನಿರ್ಮಿಸಲು ಉದ್ದೇಶಿಸಿರುತ್ತದೆ. ಸದರಿ ಜಮೀನು ಸಂಘದ ಪರವಾಗಿ ಜಿಲ್ಲಾಧಿಕಾರಿಗಳಿಂದ ದಿನಾಂಕ : 22-08-1984 ರಂದು ಭೂ ಪರಿವರ್ತನೆಯಾಗಿ, ಅಂದಿನ ಸಿ.ಐ.ಟಿ.ಬಿ.ಯಿಂದ ಬಡಾವಣೆ ಮಂಜೂರಾತಿ (Layout approval) ಆಗಿರುತ್ತದೆ.

ಈ ಮಧ್ಯೆ ದಿನಾಂಕ 27-02-1977 ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಆಡಳಿತ ಸಮಿತಿ ಮತ್ತು ಸದಸ್ಯರ ನಡುವೆ ಗುಂಪುಗಾರಿಕೆ, ಗಲಾಟೆ, ಒಳಜಗಳ ನಡೆದು ಆಡಳಿತ ಸಮಿತಿಯಲ್ಲಿ 2 ಗುಂಪುಗಳಾಗಿ ಸಂಘದ ಸಮರ್ಪಕ ಕಾರ್ಯ ನಿರ್ವಹಣೆಯಲ್ಲಿ ತೊಡಕು ಉಂಟಾಗಿದ್ದರಿಂದ ದಿನಾಂಕ 22-05-1979 ರಂದು ಅಂದಿನ ಬೆಂಗಳೂರು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು, ಸಹಕಾರ ಸಂಘಗಳ ನಗರ ಪರಿವೀಕ್ಷಕರು, ದಕ್ಷಿಣ ಇವರನ್ನು ಸದರಿ ಸಂಘದ ಆಡಳಿತಗಾರರನ್ನಾಗಿ ನೇಮಿಸಿರುತ್ತಾರೆ. ಆನಂತರ ನಡೆದ ಕಾನೂನು ವ್ಯಾಜ್ಯಗಳು ಅಂತಿಮವಾಗಿ ದಿನಾಂಕ 09-10-1998 ರಂದು ಇತ್ಯರ್ಥಗೊಂಡಿರುತ್ತದೆ. ಗೌರವ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 181418:88 ಅನ್ನು ದಿನಾಂಕ 09-10-1998 ರಂದು ಇತ್ಯರ್ಥಗೊಳಿಸಿ ಆಡಳಿತ ಸಮಿತಿ ಹಾಗೂ ಎರಡೂ ಗುಂಪುಗಳ ವ್ಯಾಜ್ಯಗಳು 20 ವರ್ಷಗಳಿಂದಲೂ ನಡೆದುಕೊಂಡು ಬಂದಿರುವುದರಿಂದ ಈಗ ಯಾವುದೇ ನೈಜ-ಆಡಳಿತ

ಮಂಡಳಿ ಎಂದು ತೀರ್ಮಾನ ಮಾಡುವುದು ನಿಷ್ಪ್ರಯೋಜನವೆಂಬುದಾಗಿ ಅಭಿಪ್ರಾಯಪಟ್ಟು, 2 ನೇ ಪ್ರತಿವಾದಿಯಾದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1 ನೇ ವಲಯರವರು ಸಂಘಕ್ಕೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿ, ಮತದಾರರ ಪಟ್ಟಿಯನ್ನು ತಯಾರಿಸಿ, ಚುನಾವಣಾಧಿಕಾರಿಯನ್ನು ನೇಮಕ ಮಾಡಿ ಆಡಳಿತ ಮಂಡಳಿಗೆ 3 ತಿಂಗಳ ಒಳಗಾಗಿ ಚುನಾವಣೆ ನಡೆಸಲು ಆದೇಶಿಸಿರುತ್ತದೆ. ಈ 20 ವರ್ಷಗಳಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ನಡೆದ ವ್ಯಾಜ್ಯಗಳಿಂದಾಗಿ ಎರಡೂ ಗುಂಪಿನವರು ಪ್ರತ್ಯೇಕವಾಗಿ ಸಂಘದ ವ್ಯವಹಾರಗಳನ್ನು ನಡೆಸಿಕೊಂಡು ಹೋಗಿರುತ್ತಾರೆ.

ಸಹಕಾರ ಸಂಘಗಳ ಉಪನಿಬಂಧಕರು-1, ಬೆಂಗಳೂರು ನಗರ ಜಿಲ್ಲೆರವರು ಪ್ರಕರಣ 30 (1) ರ ಅಡಿಯಲ್ಲಿ ಆದೇಶ ಕ್ರ. ಡಿಆರ್‌ಬಿ-1:3:ಎಸ್‌ಎಸ್‌ಎನ್ : 98-99 ದಿನಾಂಕ 19-10-98 ರ ಆದೇಶದಲ್ಲಿ ಸಹಕರಾ ವಿಸ್ತರಣಾಧಿಕಾರಿ ಬೆಂಗಳೂರು ಉತ್ತರ ತಾಲ್ಲೂಕು ಇವರನ್ನು ಸಂಘದ ಆಡಳಿತಗಾರರನ್ನಾಗಿ ನೇಮಕ ಮಾಡಿದ್ದು, ಇವರು ದಿನಾಂಕ : 22-10-98 ರಂದು ಸ್ವಯಂ ಆಗಿ ಸಂಘದ ಆಡಳಿತಗಾರರ ಪ್ರಭಾರವನ್ನು ವಹಿಸಿಕೊಂಡಿರುತ್ತಾರೆ. ಆಡಳಿತಗಾರರ ವಿವಿಧ ಪ್ರಯತ್ನಗಳಿಂದ ಎರಡೂ ಗುಂಪುಗಳಿಂದ ಎಲ್ಲಾ ಅಗತ್ಯ ದಾಖಲಾತಿಗಳನ್ನು ವಶಕ್ಕೆ ಪಡೆದುಕೊಳ್ಳಲು ಸಾಧ್ಯವಾಗದ್ದರಿಂದ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ, ಎರಡೂ ಗುಂಪಿನ ಸದಸ್ಯರ ವಿವರಗಳನ್ನು ಪಡೆದು, ಒಗ್ಗೂಡಿಸಿ, ಆಡಳಿತ ಸಮಿತಿಗೆ ದಿನಾಂಕ : 16-08-2000 ರಂದು ಚುನಾವಣೆಯನ್ನು ನಡೆಸಲಾಗಿರುತ್ತದೆ. ಆದರೆ, ಮತದಾರರ ಪಟ್ಟಿಯನ್ನು ಪ್ರಶ್ನಿಸಿ, ಕೆಲವು ಸದಸ್ಯರು ಗೌರವ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹೂಡಿದ್ದು ಈ ಸಂಬಂಧ ತಡೆಯಾಜ್ಞೆ ಇದ್ದ ಕಾರಣ ಚುನಾವಣೆ ಫಲಿತಾಂಶ ಪ್ರಕಟಿಸಲು ಸಾಧ್ಯವಾಗಿರುವುದಿಲ್ಲ. ದಿನಾಂಕ : 07-10-2007 ರಂದು ಚುನಾವಣೆಯನ್ನು ನಡೆಸಿ ಹೊಸ ಆಡಳಿತ ಮಂಡಳಿಗೆ ದಿನಾಂಕ : 10-10-2007 ರಂದು ಸಂಘದ ಪ್ರಭಾರವನ್ನು ವಹಿಸಿಕೊಡಲಾಗಿದೆ. ದಿನಾಂಕ 22-10-1998 ರಿಂದ 07-10-2007 ರ ಅವಧಿಯಲ್ಲಿ ಸಂಘದ ನಿವೇಶನಗಳನ್ನು, ಪರಭಾರೆ, ಒತ್ತುವರಿ ಅತಿಕ್ರಮಣ, ಅನಧಿಕೃತ ಕಟ್ಟಡ ನಿರ್ಮಾಣ ಇವುಗಳಿಂದ ರಕ್ಷಣೆ ಮಾಡಲು ಈ ಕೆಳಕಂಡಂತೆ ಕ್ರಮಗಳನ್ನು ಜರುಗಿಸಲಾಗಿರುತ್ತದೆ.

1. ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ಇವರಲ್ಲಿ ಸಂಘದ ಆಡಳಿತಗಾರರು ಪ್ರಕರಣ 70 ರಡಿಯಲ್ಲಿ ದಿನಾಂಕ 03-08-2000 ದಂದು

ವ್ಯಾಜ್ಯವನ್ನು ಹೂಡಿ, 1995ನೇ ಸಾಲಿನಲ್ಲಿ ಶ್ರೀ ಲಕ್ಕಪ್ಪ ಮತ್ತು ಚಿಕ್ಕಪುಟ್ಟಯ್ಯ ಗುಂಪಿನವರು ನಿಯಮಬಾಹಿರವಾಗಿ ನೈಜವಲ್ಲದ ಸದಸ್ಯರಿಗೆ ನಿವೇಶನಗಳನ್ನು ನೋಂದಣಿ ಮಾಡಿರುವುದು ಕಾನೂನುಬಾಹಿರವೆಂಬುದಾಗಿ ಪ್ರತಿಪಾದಿಸಿ, ನೋಂದಣಿಯಾಗಿದ್ದ 41 ನಿವೇಶನಗಳನ್ನು ರದ್ದುಪಡಿಸಲು ಹಾಗೂ ಮಧ್ಯಂತರ ಅರ್ಜಿಯ ಮೇಲೆ ಪ್ರತಿವಾದಿ 01 ರಿಂದ 37 ರವರು ಸಂಘದ ಜಮೀನಿನಲ್ಲಿ ಯಾವುದೇ ಕಟ್ಟಡ, ಕಾಂಪಾಂಡ್ ಇತ್ಯಾದಿಗಳನ್ನು ನಿರ್ಮಿಸದಂತೆ ದಿನಾಂಕ 03-06-2000 ರಂದು ತಡೆಯಾಜ್ಞೆಯನ್ನು ಪಡೆದುಕೊಂಡಿರುತ್ತಾರೆ. ನಂತರ ಸಹಕಾರ ಸಂಘಗಳ ಅಪರ ನಿಬಂಧಕರ ಅನುಮತಿಯ ಮೇರೆಗೆ ಈ ವ್ಯಾಜ್ಯವು ಸಹಾಯಕ ನಿಬಂಧಕರು, 3ನೇ ವಲಯ ರವರಿಗೆ ವರ್ಗಾಯಿಸಲ್ಪಟ್ಟಿರುತ್ತದೆ.

2. ಬಡಾವಣೆಯಲ್ಲಿ ಯಾರೂ ಕಟ್ಟಡವನ್ನು ನಿರ್ಮಾಣ ಮಾಡದಂತೆ ಆಡಳಿತಾಧಿಕಾರಿಯವರು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಹಲವು ಬಾರಿ ದೂರುಗಳನ್ನು ನೀಡಿ ಕಟ್ಟಡ ನಿರ್ಮಾಣ ಮಾಡದಂತೆ ರಕ್ಷಿಸಿರುತ್ತಾರೆ.

3. ಬಿ.ಬಿ.ಎಂ.ಪಿ. ಯ ಆಯುಕ್ತರು ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಿ, ಅಕ್ರಮವಾಗಿ ನೋಂದಣಿ ಮಾಡಿರುವ 41 ನಿವೇಶನಗಳ ಬಗ್ಗೆ ಖಾತೆ ಮಾಡದೇ ಇರಲು ಹಾಗೂ ಕಟ್ಟಡ ನಿರ್ಮಾಣ ಮಾಡಲು ನಕ್ಷೆ ಮಂಜೂರಾತಿ ಮಾಡದೇ ಇರಲು ಕೋರಿ, ಕ್ರಮ ಕೈಗೊಂಡಿರುತ್ತಾರೆ.

4. ಸಂಘಕ್ಕೆ ಸೇರಿರುವ ಜಮೀನಿನ ಹಾಗೂ ಅಕ್ರಮವಾಗಿ ನೋಂದಣಿ ಮಾಡಿರುವ 40 ನಿವೇಶನಗಳಿಗೆ ಮಾರಾಟ, ಪರಭಾರೆ, ಕರಾರು, ಜಿ.ಪಿ.ಎ. ವಗೈರೆಗಳಿಂದ ನೋಂದಣಿಗೆ ಅವಕಾಶ ಕಲ್ಪಿಸಿಕೊಡಬಾರದೆಂದು ಉಪನೋಂದಣಾಧಿಕಾರಿ, ರಾಜಾಜಿನಗರ ಇವರನ್ನು ಕೋರಲಾಗಿರುತ್ತದೆ.

5. ಆಡಳಿತಗಾರರು ಸಂಘದ ಜಮೀನನ್ನು ಅನಧಿಕೃತ ವ್ಯಕ್ತಿಗಳು ಅಕ್ರಮ ಮಾರಾಟ ಮಾಡಿದ್ದನ್ನು ತಪ್ಪಿಸಿ ನ್ಯಾಯಾಲಯಗಳಲ್ಲಿ ಮಧ್ಯ ಪ್ರವೇಶಿಸಿ ರಕ್ಷಣೆ ಮಾಡಲು ಅಗತ್ಯವಾದ ಕಾನೂನು ಕ್ರಮಗಳನ್ನು ಕೈಗೊಂಡಿದ್ದಾರೆ.

6. ಸಂಘದ ಲೆಕ್ಕಪತ್ರಗಳು ಲಭ್ಯವಿಲ್ಲದ್ದರಿಂದ 1975-76 ರಿಂದ ತಹಲ್‌ವರೆವಿಗೂ ಲೆಕ್ಕಪರಿಶೋಧನೆ ಮಾಡಿಸಲು ಸಾಧ್ಯವಾಗಿರುವುದಿಲ್ಲ. ಸಂಘದ ದಾಖಲಾತಿಗಳನ್ನು ಆಡಳಿತ ಸಮಿತಿಯ ಎರಡೂ ಗುಂಪುಗಳಿಂದ ಪಡೆಯಲು ನಡೆಸಿದ ಪ್ರಯತ್ನಗಳು ವಿಫಲವಾಗಿರುತ್ತವೆ.

7. ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ, ಬೆಂಗಳೂರು ಇವರ ನ್ಯಾಯಾಲಯದಲ್ಲಿ ಹೂಡಿದ್ದ ವ್ಯಾಜ್ಯ ಪ್ರಕರಣವು ದಿನಾಂಕ : 29-01-06 ರಂದು ಇತ್ಯರ್ಥವಾಗಿದ್ದು, ಸದರಿ ತೀರ್ಪಿನಲ್ಲಿ ಈ ಬಡಾವಣೆಗೆ ಸಂಬಂಧಿಸಿದಂತೆ ಗೌರವ ಉಚ್ಚ ನ್ಯಾಯಾಲಯದ ವಿವಿಧ ತೀರ್ಪುಗಳನ್ನು ಉಲ್ಲೇಖಿಸಿ, 1994 ಹಾಗೂ 1995 ರಲ್ಲಿ ಅಕ್ರಮವಾಗಿ ನೋಂದಣಿ ಮೂಲಕ ಪರಭಾರೆ ಮಾಡಿರುವುದು ಕಾನೂನುಬಾಹಿರವೆಂದು ತಿಳಿಸಿ, ನಿವೇಶನಗಳ ಮಂಜೂರಾತಿ, ಹಂಚಿಕೆ ಮತ್ತು ಶುದ್ಧ ಕ್ರಯಪತ್ರಗಳ ಮೂಲಕ ಮಾಡಿರುವ ನೋಂದಣಿಗಳನ್ನು ರದ್ದುಪಡಿಸಿ ಹಾಗೂ ಈ ಆದೇಶದಂತೆ ಉಪನೋಂಧಣಾಧಿಕಾರಿಗಳು ರಾಜಾಜಿನಗರ ರವರು ಕ್ರಮಕೈಗೊಳ್ಳಲು ಆದೇಶಿಸಲಾಗಿರುತ್ತದೆ. ಈ ಬಗ್ಗೆ ಉಪನೋಂದಣಾಧಿಕಾರಿ, ರಾಜಾಜಿನಗರ ಇವರು ಕ್ರಮಕೈಗೊಳ್ಳಬೇಕಿರುತ್ತದೆ. 41 ನಿವೇಶನಗಳ ನೋಂದಣಿಯನ್ನು ರದ್ದುಪಡಿಸಿ, ಪ್ರಕರಣ 30ಬಿ ಅಡಿ ನಿಬಂಧಕರು ನೀಡಿದ ನಿರ್ದೇಶನದಂತೆ, ನೈಜ ಸದಸ್ಯರಿಗೆ ಮತ್ತು ಅರ್ಹ ಸದಸ್ಯರಿಗೆ ನಿವೇಶನಗಳನ್ನು ದೊರೆಯುವಂತಾಗಲು ಕ್ರಮ ಕೈಗೊಳ್ಳಲು ಆದೇಶದಲ್ಲಿ ತಿಳಿಸಲಾಗಿರುತ್ತದೆ. ಈ ಆದೇಶವನ್ನು ಪ್ರಶ್ನಿಸಿ 15 ಜನ ನಿವೇಶನದಾರರು ಗೌರವ ಕೆ.ಎ.ಟಿ.ಯಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ನ್ಯಾಯಾಲಯವು ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ ಇವರ ತೀರ್ಪಿಗಡೆ ಮಧ್ಯಂತರ ತಡೆಯಾಜ್ಞೆ ನೀಡಿರುತ್ತದೆ. ಸದರಿ ತಡೆಯಾಜ್ಞೆ ಆದೇಶ ದಿನಾಂಕ : 04-02-2009 ರವರೆಗೆ ಮುಂದುವರೆದಿರುತ್ತದೆ.

8. ದಿನಾಂಕ : 07-10-2007 ರಂದು ಸಂಘದ ಆಡಳಿತ ಸಮಿತಿಗೆ ಚುನಾವಣೆ ನಡೆಸಿ ದಿನಾಂಕ : 10-10-2007 ರಂದು ಸಂಘದ ಪ್ರಭಾರವನ್ನು ಹೊಸ ಆಡಳಿತ ಸಮಿತಿಗೆ ವಹಿಸಿಕೊಡಲಾಗಿದೆ. ಚುನಾಯಿತ ಆಡಳಿತ ಸಮಿತಿಯು ದಿನಾಂಕ : 21-09-2008 ರಂದು 2007-08ನೇ ಸಾಲಿನ ಮಹಾಸಭೆಯನ್ನು ನಡೆಸಿರುತ್ತದೆ. ಚುನಾಯಿತ ಆಡಳಿತ ಸಮಿತಿಯು 2007-08ನೇ ಸಾಲಿನ "ಸರ್ವ ಸದಸ್ಯರ ಸಭೆ" ಯನ್ನು ದಿನಾಂಕ : 21-09-2008 ರಂದು ನಡೆಸಿರುತ್ತಾರೆ. ಚುನಾಯಿತ ಆಡಳಿತ ಸಮಿತಿಯು ಅಧಿಕಾರವನ್ನು ವಹಿಸಿಕೊಂಡ ನಂತರ ಸಂಘದಲ್ಲಿ ಯಾವುದೇ ನಿವೇಶನ ಗಳನ್ನು ನೋಂದಣಿ ಮಾಡಿರುವುದಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿದಾಗ ಪ್ರತಿ ಹಂತದಲ್ಲಿಯೂ ಸಹ, ಸಹಕಾರ ಇಲಾಖಾಧಿಕಾರಿಗಳು ಕಾನೂನು ರೀತ್ಯಾ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದು, ಗಮನ ಸೆಳೆಯುವ ಸೂಚನೆಯಲ್ಲಿ ಆರೋಪಿಸಿರುವಂತೆ ಸಹಕಾರ ಇಲಾಖಾಧಿಕಾರಿ

ಗಳು ನಿವೇಶನ ಹಂಚಿಕೆಯಲ್ಲಿ ಯಾವುದೇ ರೀತಿಯಲ್ಲಿ ಅಕ್ರಮವಾಗಿ ಶಾಮೀಲಾಗಿರುವುದಿಲ್ಲ. ಪ್ರತಿಯೊಂದು ಸಂದರ್ಭದಲ್ಲಿಯೂ ಸಿವಿಲ್ ನ್ಯಾಯಾಲಯ, ಸಹಕಾರ ಇಲಾಖಾಧಿಕಾರಿಗಳ ನ್ಯಾಯಾಲಯ ಹಾಗೂ ಗೌರವ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಆಗಿಂದಾಗ್ಗೆ ದಾಖಲಾಗಿ ಈ ಕಾರಣಗಳಿಂದಾಗಿ ಸಂಘದಿಂದ ನಿವೇಶನಗಳ ಹಂಚಿಕೆ ಬಗ್ಗೆ ಅಂತಿಮ ಕ್ರಮ ತೆಗೆದುಕೊಳ್ಳಲು ಅವಕಾಶವಾಗಿರುವುದಿಲ್ಲ.

ಅಧ್ಯಕ್ಷರು :- ಮಾನ್ಯ ಮಂತ್ರಿಗಳೆ, ಇನ್ನು ಮುಂದೆ ನೀವು ಉತ್ತರ ಕೊಡುವಾಗ ಸಂಕ್ಷಿಪ್ತವಾಗಿ ಉತ್ತರವನ್ನು ಕೊಡಿ. ಈಗ ಕೊಟ್ಟಿರುವ ಉತ್ತರ ಬಹಳ ಸುಧೀರ್ಘವಾಯಿತು.

ಶ್ರೀ ಆರ್. ರೋಷನ್ ಬೇಗ್ :- ಮಾನ್ಯ ಅಧ್ಯಕ್ಷರೆ, ನೀವು ಅಧಿಕಾರಿಗಳಿಗೂ ಕೂಡ ಹೇಳಬೇಕು. ಅವರು ಉತ್ತರವನ್ನು ರೆಡಿ ಮಾಡಿಕೊಡುತ್ತಾರೆ. ಸಂಕ್ಷಿಪ್ತವಾಗಿ ಅಧಿಕಾರಿಗಳು ಉತ್ತರವನ್ನು ರೆಡಿ ಮಾಡಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:-ನಡೆದಿರುವ ಅವ್ಯವಹಾರದ ಬಗ್ಗೆ ಅಧಿಕಾರಿಗಳು ಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಅದೂ ಪೂರ್ತಿಯಾಗಿ ಸರಿಯಾಗಿರಬೇಕಲ್ಲ.

ಶ್ರೀ ನೆ.ಲ.ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ; , , ,

ಶ್ರೀ ಬಿ.ಎಸ್. ಯಡಿಯೂರಪ್ಪ :- ನರೇಂದ್ರಬಾಬುರವರೆ, ಮಾನ್ಯ ಮಂತ್ರಿಗಳು ಸುಧೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಹೀಗಿದ್ದರೂ ಮತ್ತೆ ಸ್ಪಷ್ಟೀಕರಣವನ್ನು ಬಯಸುತ್ತೀರ.

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ನಾನು ಸಚಿವರಲ್ಲಿ, ಮಾನ್ಯ ಮುಖ್ಯಮಂತ್ರಿಗಳ ಮತ್ತು ಈ ಸಭೆಗೆ ತಮ್ಮ ಮುಖೇನ ನಾನು ಸ್ಪಷ್ಟೀಕರಣ ಕೇಳಬಯಸುವುದೇನೆಂದರೆ, ಬಹುಶಃ ನಾನು ಶಾಲೆಗೆ ಹೋಗುತ್ತಿದ್ದ ದಿನಗಳಿಂದಲೂ ಆ ಒಂದು ಸಂಸ್ಥೆಗೆ 1973-74 ರಿಂದಲೂ ನನ್ನ ತಾಯಿಯವರು ಸದಸ್ಯರಾಗಿದ್ದರು. ತದನಂತರ ನಾನು ಆ ಕ್ಷೇತ್ರದ ಶಾಸಕನಾದೆ. ನನ್ನ ತಂದೆಯವರು ಕೊಳ್ಳೆಗಾಲದಲ್ಲಿ ಎಲ್.ಐ.ಸಿ. ಡೆವಲಪ್‌ಮೆಂಟ್ ಆಫೀಸರ್ ಆಗಿದ್ದಾಗ ಅಲ್ಲಿ ತೆಗೆದುಕೊಂಡಿದ್ದ ವೆಹಿಕಲ್ ಅನ್ನು ಮಾರಿ ಆ ಸಂಸ್ಥೆಗೆ ನಿವೇಶನಕ್ಕಾಗಿ ದುಡ್ಡನ್ನು ಕಟ್ಟಿದರು. ಬಹುಶಃ ನಿಮಗೆ ಆಶ್ಚರ್ಯವಾಗಬಹುದು. ಕಳೆದ 6 ತಿಂಗಳ ಹಿಂದೆ ನನ್ನ ತಂದೆಯವರು

ತೀರಿಹೋದರು. ಕಡೆಗೂ ಅವರಿಗೆ ಸೈಟ್ ತೆಗೆದುಕೊಳ್ಳುವುದಕ್ಕಾಗಲಿಲ್ಲ ಮತ್ತು ಮನೆ ಕಟ್ಟುವುದಕ್ಕಾಗಲಿಲ್ಲ. ಇದೇ ರೀತಿ 41 ಜನ ಹಣ ಕಟ್ಟಿದ ಸದಸ್ಯರು ಇವೊತ್ತು ಸೈಟ್ ಇಲ್ಲದೇ ಬೀದಿಯಲ್ಲಿದ್ದಾರೆ. ಆದರೆ ವಯಸ್ಸಿನಲ್ಲಿ ಚಿಕ್ಕವರಿದ್ದು ಯಾವುದೇ ರೀತಿಯಲ್ಲಿಯೂ ನೈಜ ಸದಸ್ಯರಾಗದಿದ್ದವರಿಗೆ ಆ ಸಂಸ್ಥೆ ಸೈಟ್‌ಗಳನ್ನು ಅಲಾಟ್ ಮಾಡಿದ್ದಾರೆ. ಆ ಸಂಸ್ಥೆಯಲ್ಲಿ ಚುನಾವಣೆ ನಡೆಸಿರತಕ್ಕಂಥದ್ದು ಬೋಗಸ್ ಆಗಿದೆಯೆಂದು ನಿಮ್ಮ ಹೇಳಿಕೆಯಲ್ಲಿಯೇ ಕೊಟ್ಟಿದ್ದೀರಿ. ನಾನು ಏಕೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ ಅಲ್ಲಿ ಈಗ ಒಂದು ಚದರ ಅಡಿಗೆ 10 ಸಾವಿರ ರೂ. ಬೆಲೆ ಇದೆ. ಇವೊತ್ತಿಗೂ ನಾನು ಬಾಡಿಗೆ ಮನೆಯಲ್ಲಿದ್ದೇನೆ. ಶಾಸಕನಾಗಿ ಎರಡು ಬಾರಿ ಆಯ್ಕೆಯಾಗಿದ್ದೇನೆ. ಕಾರ್ಪೊರೇಟರ್ ಆಗಿ ಮೂರು ಬಾರಿ ಇದ್ದೆ. ಆದರೂ ಕೂಡ ನನಗೆ ಸ್ವಂತ ಮನೆ ಇನ್ನೂ ಇಲ್ಲ. ಇವೊತ್ತು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಬಹಳ ಜನ ಶಾಸಕರು ಇದೇ ರೀತಿ ಸ್ವಂತ ಮನೆ ಇಲ್ಲದವರು ಇರಬಹುದು. ಅಲ್ಲಿ ಪ್ರಾಮಾಣಿಕವಾಗಿ ನೈಜ ಸದಸ್ಯರಾಗಿರುವವರಿಗೆ ಸಹಕಾರ ಇಲಾಖೆಯವರು ಅನ್ಯಾಯ ಮಾಡಿದ್ದಾರೆ ಎನ್ನುವುದಕ್ಕೆ ನಾನು ನಿದರ್ಶನ ಕೊಡುತ್ತೇನೆ. ಡಾಗೆ ಎನ್ನತಕ್ಕಂಥ ಅಧಿಕಾರಿಯನ್ನು ಆ ಸಂಸ್ಥೆಯ ಅಡ್ಮಿನಿಸ್ಟ್ರೇಟರ್ ಆಗಿ ನೇಮಕ ಮಾಡಿದರು. ಅವರನ್ನು ಸೈಟ್ ನೋಡಿಕೊಳ್ಳಿ ಎಂದು ನೇಮಕ ಮಾಡಿದರೆ ಒಂದೊಂದು ಲಕ್ಷ ರೂಪಾಯಿಗೆ ವೆಸ್ಟ್ ಆಫ್ ಕಾರ್ಡ್ ರೋಡ್‌ನಲ್ಲಿ ವಾಟಾಳ್ ನಾಗರಾಜ್‌ರವರ ಮನೆಯ ಹಿಂದುಗಡೆ ಮತ್ತೆ ಸೋಮಶೇಖರ್ ಎಂಬ ಅಧಿಕಾರಿಯ ಮನೆ ಇರುವ ಕಡೆ ಸೈಟ್‌ಗಳನ್ನು ಮಾರಿದ್ದಾರೆ. ಅಲ್ಲಿ ಇವೊತ್ತು ಒಂದು ಚದರ ಅಡಿಗೆ ಹತ್ತು ಸಾವಿರ ರೂಪಾಯಿ ಬೆಲೆ ಇದೆ. ಅದನು ್ನ ಒಂದು ಲಕ್ಷ ರೂಪಾಯಿಗೆ ಕೊಟ್ಟಿದ್ದಾರೆ. ನಾಚಿಕೆಯಾಗಬೇಕು. ಇವೊತ್ತು ಉತ್ತರದಲ್ಲಿ ಅಲ್ಲಿ ಯಾವುದೇ ರೀತಿಯ ಕಟ್ಟಡ ಕಟ್ಟಿಲ್ಲ ಮತ್ತು ಕಾಂಪೌಂಡ್ ಕಟ್ಟಿಲ್ಲವೆಂದು ಹೇಳಿದ್ದಾರೆ. ಅಲ್ಲಿರುವ ಜಾಗ ಸುಮಾರು 150 ರಿಂದ 200 ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಅದೇ ಏರಿಯಾದಲ್ಲಿ ನಾನು ಶಾಸಕನಾಗಿದ್ದವನು. ಅದನ್ನು ಸರ್ಕಾರ ವಹಿಸಿಕೊಳ್ಳಲಿ ಅಥವಾ ನೈಜ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಿ. ಈ ರೀತಿಯಾಗಿ ನೆಲಗಳ್ಳರು ಬೋಗಸ್ ಮಾಡತಕ್ಕಂಥದ್ದನ್ನು ತಡೆಯಬೇಕು. ಅಲ್ಲಿಯ ಒಬ್ಬ K.V.K.Reddy ಎನ್ನತಕ್ಕಂಥ ಎ.ಸಿ.ಪಿ.ಯವರಿಗೆ ಅಲ್ಲಿ ನಡೆದ ಅಡ್ಮಿನಿಸ್ಟ್ರೇಟರ್ ಏನು ಮಾಡಿದ್ದರು. ಅವರಿಗೆ ತೆಗೆದುಕೊಂಡು ಹೋಗಿ ತೋರಿಸಿದರೆ, ಏನ್ರಿ ಈ A.R.C.S ನವರು, 138B of ಸೆಕ್ಷನ್‌ನಲ್ಲಿ ಕೂಡ Co-operative Registration Act ಪ್ರಕಾರವಾಗಿ

ಸಂಪೂರ್ಣವಾಗಿ quasi judiciary powers ಇದೆ. ಅವರಿಗೆ ಹೋಗಿ ಹೇಳಿದರೆ,ನೀವು ಕೊಡಲಿಕ್ಕೆ ನೀವ್ಯಾರಿ ಎನ್ನುತ್ತಾರೆ. ಹೈಕೋರ್ಟ್ ಬಹಳ ಸ್ಪಷ್ಟವಾಗಿ ಹೇಳಿದೆ. ಏನಿದ್ದರೂ ನೀವು ಲೋಯರ್ ಕೋರ್ಟ್‌ನಲ್ಲಿ ಮತ್ತು ಅಡ್ಮಿನಿಸ್ಟ್ರೇಟಿವ್ ಕೋರ್ಟ್‌ಗಳಲ್ಲಿ ತೀರ್ಮಾನ ಮಾಡಿಕೊಳ್ಳಬೇಕೆಂದು ಡೈರಕ್ಷನ್ ಕೊಟ್ಟರೆ, ಎ.ಸಿ.ಪಿ. ಹೇಳುತ್ತಾರೆ, ಒಬ್ಬ ಸಾಯಿ ಡೆವಲಪರ್ಸ್ ಎನ್ನುವವರು ಕಟ್ಟುತ್ತಿದ್ದಾರೆ,ಇವೊತ್ತು ಚೌಡರೆಡ್ಡಿ ಎನ್ನತಕ್ಕಂಥವರ ಸಂಬಂಧಿಕರು ಕಟ್ಟುತ್ತಿದ್ದಾರೆ. ಇದನ್ನು ಯಾರಿಗೆ ಹೇಳೋಣ. ನಾನು ಶಾಸಕನಾಗಿದ್ದರು ಕೂಡ ಒಬ್ಬ ಸದಸ್ಯರು ಈಗಾಗಲೇ ನನಗೆ ಕೇಳಿದಂತೆ ನನ್ನ ತಾಯಿಗೇ ನ್ಯಾಯ ಕೊಡುವುದಕ್ಕಾಗಲಿಲ್ಲವೆಂದ ಮೇಲೆ ಆ ಸಂಸ್ಥೆಯಲ್ಲಿ ನೈಜ ಸದಸ್ಯರಾಗಿರುವವರಿಗೆ ಹೇಗೆ ನ್ಯಾಯ ಕೊಡಿಸುತ್ತಾರೆಂದು ಕೇಳುತ್ತಾರೆ. ಆದುದರಿಂದ ದಯವಿಟ್ಟು ನಾನು ಕೇಳುತ್ತೇನೆ, ಈ ಒಂದು ಪ್ರಕರಣದ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕು. ಬೆಂಗಳೂರು ನಗರದಲ್ಲಿ ಇಂಥ ಅನೇಕ ಸೊಸೈಟಿಗಳಿಂದ ಬೋಗಸ್ ಆಗತಕ್ಕಂಥದ್ದು ಆಗುತ್ತಿದೆ. ಆ ಭೂಮಿಯನ್ನು ಸರ್ಕಾರವೇ ತೆಗೆದುಕೊಳ್ಳಲಿ ಅಥವಾ ನೈಜ ಸದಸ್ಯರಿಗೆ ಸೈಟ್ ಹಂಚಲಿ. ಈಗಾಗಲೇ ಒಂದು ಎಕರೆ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇನ್ನೊಂದು ಎಕರೆ ಕೂಡ ಈಗ ಒತ್ತುವರಿ ಮಾಡಿದ್ದಾರೆ. ಈ ಜಾಗದಲ್ಲಿ ಅಪಾರ್ಟ್‌ಮೆಂಟ್‌ಗಳು ಬರುತ್ತಿವೆ. ಇವೊತ್ತು ಓಪನ್ ಆಗಿದೆ. ಆದುದರಿಂದ ಇದನ್ನು ಸಿ.ಓ.ಡಿ. ಎನ್‌ಕ್ವೈರಿಗೆ ಕೊಡಿ. ತನಿಖೆಯಾಗಲಿ. ಸರ್ಕಾರಕ್ಕೆ ಆ ಭೂಮಿ ಹೋಗಲಿ ಅಥವಾ ನೈಜ ಸದಸ್ಯರಿಗೆ ಹಂಚಿಕೆಯಾಗಲಿ. ಈ ರೀತಿ ಬೋಗಸ್ ಸಂಸ್ಥೆಗೆ ಕೊಟ್ಟಿರತಕ್ಕಂಥದ್ದನ್ನು ಇವರ ಹೇಳಿಕೆಯಲ್ಲಿಯೇ ಬಹಳ ಸ್ಪಷ್ಟವಾಗಿ ಕೊಟ್ಟಿದ್ದಾರೆ. ನಾನು ಹೇಳುತ್ತೇನೆ, ಈಗಿರತಕ್ಕಂಥ ಅಧಿಕಾರಿಗಳಲ್ಲ. ಹಿಂದೆ ಡಾಗೆ ಎನ್ನತಕ್ಕಂಥ ಅಧಿಕಾರಿ ಈ ರೀತಿ ಮಾಡಿದ್ದಾರೆ. ಅವರು ಈಗ ತೀರಿಹೋಗಿದ್ದಾರೆ. ಮೊನ್ನೆ ಈ ಸಂಸ್ಥೆಯಲ್ಲಿ ಚುನಾವಣೆ ನಡೆಸಿರುವ ಬಗ್ಗೆ ಪತ್ರಿಕೆಯಲ್ಲಿ ನೋಡಿ ಸದಸ್ಯರಿಗೆ ಗೊತ್ತಾಗಿದೆ. ಆ ಸಂಸ್ಥೆಯ ಸದಸ್ಯನೇ ಅಲ್ಲದವನ್ನು ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಏನು ಸ್ವಾಮಿ ಇಂಥ ಅನ್ಯಾಯ. ಇವೊತ್ತು ಬೆಂಗಳೂರು ನಗರದಲ್ಲಿ ಇಂಥದ್ದಕ್ಕೆ ಅವಕಾಶಗಳನ್ನು ಮಾಡಬೇಡಿ. ನಾನು ಕೇಳಿರುವುದಕ್ಕೆ ಸ್ಪಷ್ಟೀಕರಣವನ್ನು ಕೊಡಿ. ನೀವು ಉತ್ತರದಲ್ಲಿ ಅಲ್ಲಿ ಕಟ್ಟಡ ಇಲ್ಲ, ಕಾಂಪೌಂಡ್ ಕಟ್ಟಿಲ್ಲವೆಂದು ಹೇಳಿದ್ದೀರಿ. ನಾನು ಫೋಟೋ ತೆಗೆದಿರುವುದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಇವೊತ್ತೇ ನೀವು ಪೋಲಿಸ್ ಆಫೀಸರ್‌ರವರನ್ನು ಕರೆದುಕೊಂಡು ಅಲ್ಲಿಗೆ ಹೋಗಿ ನೋಡಿ. ಅಲ್ಲಿ ಎಷ್ಟು ಬಿಲ್ಡಿಂಗ್‌ಗಳು ಬಂದಿವೆ ಮತ್ತು ಇವೊತ್ತಿಗೂ ಅಲ್ಲಿ ಎಷ್ಟು construction ಗಳು

ಆಗುತ್ತಿದೆಯೆಂದು ತಾವು ನೋಡಬಹುದು. ಜನ ಸಾಮಾನ್ಯರು ಈ ಬಗ್ಗೆ ಯಾರಿಗೆ ಹೇಳುವುದಕ್ಕಾಗುತ್ತದೆ ಹೇಳಿ. ರೌಡಿಸಂ ಮತ್ತು ನೆಫೋಟಿಸಂಗಳು ಬೆಂಗಳೂರು ನಗರದಲ್ಲಿ ಏಕೆ ಆಗುತ್ತಿದೆಯೆಂದರೆ ಇಂಥ hand in glow. ಆದುದರಿಂದ ಈ ಒಂದು ಪ್ರಕರಣದ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಎಲ್ಲವೂ ಗೊತ್ತಾಗಲಿ. ಬೆಂಗಳೂರು ನಗರದಲ್ಲಿ ಸಂಸ್ಥೆಗಳು ನೈಜ ಸದಸ್ಯರಿಗೆ ಸೈಟ್ ಕೊಡದೆ ಮೋಸ ಮಾಡುತ್ತಿದ್ದಾರೆ. ಅಲ್ಲಿರುವ ಜಾಗ ಸುಮಾರು 150 ರಿಂದ 200 ಕೋಟಿ ರೂಪಾಯಿ ಬೆಲೆ ಬಾಳುತ್ತದೆ ಸ್ವಾಮಿ. ಆ ಜಾಗವನ್ನು ಸರ್ಕಾರ ತೆಗೆದುಕೊಳ್ಳಲಿ ಅಥವಾ ನೈಜ ಸದಸ್ಯರಿಗೆ ಅಲಾಟ್ ಮಾಡಲು ಕ್ರಮ ತೆಗೆದುಕೊಳ್ಳಿ. ಈ ರೀತಿಯಾಗಿ ಅಲ್ಲಿ ನೈಜ ಸದಸ್ಯರಿಗೆ ಮಾಡಿರುವುದು ಘೋರ ಅನ್ಯಾಯ. ಬೆಂಗಳೂರು ನಗರದಲ್ಲಿ ಇಂಥ ಜಾಗಗಳಲ್ಲಿಯೇ ನೈಜ ಸದಸ್ಯರುಗಳಿಗೆ ಆಗತಕ್ಕಂಥ ಅನ್ಯಾಯಗಳ ಬಗ್ಗೆ ಎ.ಸಿ.ಪಿ. ಯವರನ್ನು ಕೇಳಿದರೆ, ಬರೇ ಇಂಥ ಲ್ಯಾಂಡ್ ಡೀಲ್‌ಗಳನ್ನು ಮಾಡುವುದಕ್ಕೋಸ್ಕರ ಈ ರೀತಿ ನಡೆಯುತ್ತಿದೆ ಎನ್ನುತ್ತಾರೆ. ಬಡವರ ಮೇಲೆ ಅನ್ಯಾಯ ಮಾಡಿ ಹೇಗೋ ರೌಡಿಗಳ ಜೊತೆ hand in glow ಆಗಿ ಇವೊತ್ತು ಅನ್ಯಾಯವನ್ನು ಮಾಡುತ್ತಿದ್ದಾರೆ. ನಾನು ಈ ಬಗ್ಗೆ ವಿನಂತಿ ಮಾಡುತ್ತೇನೆ. ಈ ಪ್ರಕರಣದ ಬಗ್ಗೆ ಸಿ.ಓ.ಡಿ. ತನಿಖೆಯಾಗಲಿ. ಸತ್ಯಾಸತ್ಯತೆಗಳು ಹೊರಗೆ ಬರಲಿ. ನಾನು ಆಗ ಅಪ್ರಿಸಿಯೇಟ್ ಮಾಡುತ್ತೇನೆ. ಈಗಾಗಲೇ ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಕೆಲವು ಸತ್ಯಗಳನ್ನು ಹೇಳಿದ್ದಾರೆ. ಆದರೆ ಕಡೆಯ ಪ್ಯಾರಾದಲ್ಲಿ ಹೇಳಿರುವುದು ಸರಿಯಿಲ್ಲ. ಅಲ್ಲಿ ಯಾವುದೇ ಬಿಲ್ಡಿಂಗ್ ಕಟ್ಟಿಲ್ಲ, ಅಲ್ಲಿ ಕಾಂಪೌಂಡ್ ಕಟ್ಟಿಲ್ಲವೆಂದು ಹೇಳಿದ್ದೀರಿ. ಅದು ಸತ್ಯಕ್ಕೆ ದೂರವಾದುದು. ಅಧಿಕರಿಗಳು ಬೋಗಸ್ ಉತ್ತರವನ್ನು ಕೊಡಿಸಿದ್ದಾರೆ. ಸದಸ್ಯರ ಹಕ್ಕಿಗೆ ಚ್ಯುತಿಯಾದಂತಾಗುತ್ತದೆ. ಕೇವಲ ಸದಸ್ಯರಿಗಲ್ಲ, ಇಡೀ ಸದನಕ್ಕೇ ತಪ್ಪು ಮಾಹಿತಿಯನ್ನು ಕೊಟ್ಟಿರುವುದಾಗಿದೆ. ಏಕೆಂದರೆ ಅಧಿಕಾರಿಗಳು ಇದರಲ್ಲಿ ಷಾಮೀಲಾಗಿದ್ದಾರೆ. ದಯವಿಟ್ಟು ಈ ಬಗ್ಗೆ ಸಿ.ಓ.ಡಿ. ತನಿಖೆಗೆ ಕೊಟ್ಟು ಆಗಿರತಕ್ಕಂಥದ್ದನ್ನು ರದ್ದು ಮಾಡಿ ಅದನ್ನು ಸರ್ಕಾರಕ್ಕೆ ತೆಗೆದುಕೊಳ್ಳಲಿ ಅಥವಾ ನೈಜ ಸದಸ್ಯರಿಗೆ ಕೊಡಲಿ. ಇದಲ್ಲದೆ ತಪ್ಪು ಮಾಹಿತಿ ಕೊಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಸಹಕಾರಿ ಇಲಾಖೆಯಲ್ಲಿ ಕೆಲವು ಉನ್ನತ ಅಧಿಕಾರಿಗಳು ಇದರಲ್ಲಿ involve ಆಗಿದ್ದಾರೆ. ಇದರ ಬಗ್ಗೆ ಗಂಭೀರವಾಗಿ ಮುಂದಿನ ಅಧಿವೇಶನದಲ್ಲಿ ದೀರ್ಘವಾಗಿ ಚರ್ಚೆಗೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೇ, ಒಂದು ಮಾತು ಏನೆಂದರೆ ಈಗ ನಾನೂ ಕೂಡ ಅಲ್ಲೇ ವಾಸ ಮಾಡುತ್ತಿರತಕ್ಕಂಥವನು. ಈಗ ಸದನಕ್ಕೆ ತಪ್ಪು ಮಾಹಿತಿ ಕೊಡತಕ್ಕಂಥಾದ್ದು ಆಗಬಾರದು. ನಿಮ್ಮ officeನಲ್ಲಿ ಕುಳಿತು ಅಥವಾ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಯಾರನ್ನಾದರೂ ಕಳುಹಿಸಿ ಅಥವಾ phoneನಲ್ಲಿ ಮಾಹಿತಿಯನ್ನು ತರಿಸಿಕೊಳ್ಳಿ. ಅಲ್ಲಿ compound ಇದೆ, ಈಗಾಗಲೇ ಅಲ್ಲಿ building ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ರೀತಿ ಸದನಕ್ಕೆ ತಪ್ಪು ಮಾಹಿತಿ ಕೊಡುವುದು ಸರಿಯಲ್ಲ. ದಯಮಾಡಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇದನ್ನು COD ತನಿಖೆಗೆ ಕೊಡಿ.

(ಗೊಂದಲ)

ಶ್ರೀ ಯು.ಟಿ. ಖಾದರ್ :- ಮಾನ್ಯ ಅಧ್ಯಕ್ಷರೇ, ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ, ಯಾವ ಅಧಿಕಾರಿ ಮಾಹಿತಿ ಕೊಟ್ಟಿದ್ದಾರೆ ತಕ್ಷಣ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಿ.

ಶ್ರೀ ಲಕ್ಷ್ಮಣ್ ಎಸ್. ಸವದಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ನರೇಂದ್ರಬಾಬುರವರು ಅಲ್ಲಿ ಒಬ್ಬ ಅಧಿಕಾರಿ ಶಾಮೀಲಾಗಿದ್ದಾನೆ ಎಂದು ಪ್ರಸ್ತಾವನೆ ಮಾಡಿದ್ದಾರೆ. ಆದರೆ ಢಾಂಗಿ ಎನ್ನುವ ಅಧಿಕಾರಿ ಈಗಾಗಲೇ ಮರಣ ಹೊಂದಿರುತ್ತಾರೆ. ನಮ್ಮ ಇಲಾಖೆಯ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಅವರು ಮಾಡಿರುವಂತಹ ಆರೋಪ ಏನಿದೆ, ಅದರ ಬಗ್ಗೆ ದಾಖಲಾತಿಗಳನ್ನು ಕೊಟ್ಟರೆ ನಾವು ಕಾನೂನು ಚೌಕಟ್ಟಿನಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು, ಆ ರೀತಿ ಕಾನೂನು ಕ್ರಮವನ್ನು ಖಂಡಿತವಾಗಿ ನಾವು ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ಅವರು CODಗೆ refer ಮಾಡಬೇಕೆಂದು ಹೇಳುತ್ತಿದ್ದಾರೆ, ಆದರೆ ಇದರ ಬಗ್ಗೆ ಈಗಾಗಲೇ KATಯಲ್ಲಿ case ಇರುವುದರಿಂದ, ಇದನ್ನು COD ಗೆ ವಹಿಸುವುದು ಸಾಧುವಲ್ಲವೆಂದು ಈ ಸದನದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :- ಅವರು ಕಟ್ಟಡದ compound ಬಗ್ಗೆ ಸರಿಯಾದ ಮಾಹಿತಿ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಹೇಳಿ.

ಶ್ರೀ ಲಕ್ಷ್ಮಣ್ ಎಸ್. ಸವದಿ :- ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ನಾನು ಖುದ್ದಾಗಿ ಆ ಸ್ಥಳಕ್ಕೆ visit ಕೊಡುತ್ತೇನೆ. ಅದರ ಬಗ್ಗೆ ನಾನು ಮಾಹಿತಿಯನ್ನು ತಿಳಿದುಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಅವರು ಕೇಳಿದ್ದೇನೆಂದರೆ societyಯನ್ನು supercede ಮಾಡಿ, administrator ಹಾಕಿ, ಅದನ್ನು Government ವಶಕ್ಕೆ ತೆಗೆದುಕೊಳ್ಳಬೇಕು, ಅದರಲ್ಲಿ ನ್ಯಾಯ ಸಿಗುತ್ತದೆ. ಇಲ್ಲದಿದ್ದರೆ ರೆಕಾರ್ಡ್ ತಿದ್ದತಕ್ಕಂಥಾದ್ದು, ತಿರುಚತಕ್ಕಂಥಾದ್ದು ಆಗುತ್ತದೆ. ಅದಕ್ಕಾಗಿ ಸರ್ಕಾರ ವಹಿಸಿಕೊಳ್ಳಬೇಕು. ಅದು ಒಂದು ವಿಚಾರ. ಸರ್ಕಾರಕ್ಕೆ ಯಾವುದೇ ಕಾರಣಕ್ಕೆ ವಹಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆಂದರೆ COD enquiry ಮಾಡಿ, ಏಕೆಂದರೆ ಅಲ್ಲಿ ಸ್ಥಳೀಯ ಪೊಲೀಸರು involve ಆದಕಾರಣ, ಅಲ್ಲಿ ಕೆಲವು ರೌಡಿಗಳನ್ನು ತೆಗೆದುಕೊಂಡು ಕಟ್ಟಡವನ್ನು ಪ್ರಾರಂಭ ಮಾಡುತ್ತಿರುವ ಕಾರಣ, ಸೋವೋಟೋ co-operate Departmentಗೆ action ತೆಗೆದುಕೊಳ್ಳುವುದಕ್ಕೆ ತೊಂದರೆ ಆಗಬಹುದು. ಆದುದರಿಂದ ಇದು COD enquiry ಮಾಡಿದರೆ, ಖಂಡಿತವಾಗಿ ನಿಷ್ಪಕ್ಷಪಾತವಾಗಿ ಆಗುತ್ತದೆ. ಆಗ ಇದರಲ್ಲಿ ಯಾವ ತೊಂದರೆ ಕೂಡ ಆಗುವುದಿಲ್ಲ. ಯಾರಿಗೂ ಸೀಲ್ಡ್ ಮಾಡುವ ಪ್ರಶ್ನೆ ಇಲ್ಲ. ನೀವು ಇದರಲ್ಲಿ ಯಾರಿಗೂ ರಕ್ಷಣೆ ಕೊಡುವ ಪ್ರಶ್ನೆ ಇಲ್ಲ. ಅದಕ್ಕೆ ನೇರವಾಗಿ COD enquiry ಮಾಡಿಸುವುದಕ್ಕೆ ಒಪ್ಪಿಕೊಳ್ಳಿ. ಇಲ್ಲದಿದ್ದರೆ supercede ಮಾಡಿ ನಿಮ್ಮ administratorಗೆ ಹಾಕಿ.

ಶ್ರೀ ಲಕ್ಷ್ಮಣ್ ಎಸ್. ಸವದಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಫೆಬ್ರವರಿ 2ನೇ ತಾರೀಖಿನವರೆಗೂ ಕೂಡ ಅದಕ್ಕೆ KATಯಲ್ಲಿ ತಡೆಯಾಜ್ಞೆಯಿರುವುದರಿಂದ, ಆ ತಡೆಯಾಜ್ಞೆ ತೆರವಾದ ಮೇಲೆ ಅಲ್ಲಿ ಆಡಳಿತ ಮಂಡಲಿಯವರು ಏನೇನು ಲೋಪದೋಷಗಳನ್ನು ಮಾಡಿದ್ದಾರೆ, ಅದನ್ನು ಖುದ್ದಾಗಿ ನಾನು ಗಮನಿಸುತ್ತೇನೆ. ಅದರ ಜೊತೆಗೆ ಅಲ್ಲಿ ತಪ್ಪಿತಸ್ಥ ಅಧಿಕಾರಿ ಯಾರಿದ್ದರೂ ಸಹ ಕಾನೂನು ಚೌಕಟ್ಟಿನಲ್ಲಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅದನ್ನು CODಗೆ refer ಮಾಡುವುದಕ್ಕಿಂತಲೂ . . .

ಶ್ರೀ ಮಲ್ಲಿಕಾರ್ಜುನ ಖರ್ಗೆ :- KATಯಲ್ಲಿ ಇರುವುದಕ್ಕೂ ಇದನ್ನು COD enquiry ಮಾಡುವುದಕ್ಕೂ ಸಂಬಂಧವಿಲ್ಲ. ನಿಮಗೆ ಗೊತ್ತಿದ್ದ ಹಾಗೆ KATನಲ್ಲಿ civil aspects ನೋಡುತ್ತಾರೆ. CODಯವರು criminal aspects ನೋಡುತ್ತಾರೆ. ಇವತ್ತು conspiracy ಯಾರದು? cheating ಯಾರು ಮಾಡಿದ್ದಾರೆ? ದುಡ್ಡು ತೆಗೆದುಕೊಂಡು ಮೋಸ ಮಾಡಿರುವುದು, ಇದು ಈ portion. ಅದಕ್ಕೆ KAT ಅಡ್ಡ ಬರುವುದಿಲ್ಲ. KAT ಮತ್ತು COD enquiryಗೂ ಯಾವ ಸಂಬಂಧ ಕೂಡ ಬರುವುದಿಲ್ಲ. ಆದುದರಿಂದ ನೀವು COD enquiryಗೆ ಹಾಕಿ, KATನಲ್ಲಿ ಅವರು ಏನು ಹೇಳುತ್ತಾರೆ ಹೇಳಲಿ. ಇಲ್ಲವೆಂದರೆ ನಿಮ್ಮ ಮೇಲೆ ನಿಮಗೆ ವಿಶ್ವಾಸ ಇದೆಯಲ್ಲವೇ, ನೀವು ಮಾಡಿ.

ಶ್ರೀ ಲಕ್ಷ್ಮಣ್ ಎಸ್. ಸವದಿ :- ಅದನ್ನು ನಾನೇ ಖುದ್ದಾಗಿ inspection ಮಾಡುತ್ತೇನೆ. ಅವರಿಗೆ ಏನು ನ್ಯಾಯ ಸಿಗಬೇಕಾಗಿದೆ, ಅವರಿಗೆ ನ್ಯಾಯ ಕೊಡಿಸುವುದಕ್ಕೆ ನಮ್ಮ ಇಲಾಖೆಯಿಂದ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೇ, ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಒಂದು ಸತ್ಯದ ಮೇಲೆ ಪ್ರತಿಪಾದಿಸುವುದಕ್ಕೆ ಈ ಸದನದಲ್ಲಿ ಅವಕಾಶ ಇಲ್ಲವೆಂದರೆ ಹೇಗೆ? ಮಾನ್ಯ ಸಚಿವರಿಗೆ ತಪ್ಪು ಮಾಹಿತಿಯನ್ನು ಅಧಿಕಾರಿಗಳು ಕೊಡುತ್ತಾರೆ, ಪಾಪ ನಾನು ಸಚಿವರನ್ನು ದೂರುತ್ತಿಲ್ಲ. ಅಧಿಕಾರಿಗಳು ಅಲ್ಲಿ ಕಟ್ಟಡ ಕಟ್ಟುತ್ತಿಲ್ಲವೆಂದು ಮಾಹಿತಿ ಕೊಟ್ಟಿದ್ದಾರೆ. ಅಲ್ಲಿ ಇವತ್ತೂ ಕೂಡ earth work ಆಗುತ್ತಿದೆ, Apartment ಆಗಿದೆ, ಆಗುತ್ತಿದೆ.

ಅಧ್ಯಕ್ಷರು :- ಸಚಿವರು ನಾನೇ ಖುದ್ದಾಗಿ ಹೋಗಿ inspection ಮಾಡುತ್ತೇನೆಂದು ಹೇಳಿದ್ದಾರಲ್ಲ.

ಶ್ರೀ ನೆ.ಲ. ನರೇಂದ್ರಬಾಬು :- ದಯವಿಟ್ಟು ಇದನ್ನು ಮುಚ್ಚಿ ಹಾಕುವುದು ಬೇಡ. ವಾಸ್ತವಾಂಶ ಏನೆಂದರೆ ನಾನೇ ಸ್ವತಃ ರಿಜಿಸ್ಟ್ರಾರ್ ಹತ್ತಿರ ಹೋಗಿ ಹಿಂದೆ ಇದ್ದಂತಹ ಪೆರುಮಾಳ್, ಗೋಪಾಲಕೃಷ್ಣ ಗೌಡರಿಗೆ, ನೋಡಿ ಸ್ವಾಮಿ ನಾನು ಈ ಕ್ಷೇತ್ರದ ಶಾಸಕ, ಅಲ್ಲಿ ಅನ್ಯಾಯವಾಗುತ್ತಿದೆ ರಕ್ಷಿಸಿ ಎಂದು ಹೇಳಿದರೂ ಕೂಡ ಆಗುತ್ತಿಲ್ಲ. ಒಬ್ಬ police officerಗೆ ಹೋಗಿ ಹೇಳಿದರೆ ACP ಅವರಿಗೆ ಏನು power ಇದೆ, Courtಗೆ ಹೋಗಿ ಹೇಳಲಿ ಎಂದು ಹೇಳಿ

acknowledgement ಕೂಡ ಕೊಡುವುದಿಲ್ಲ. ಅದಕ್ಕೆ stay order ಕೊಟ್ಟಿರುವುದು ಯಾವತ್ತು? operative portion ಯಾವುದಾದರೂ ಇರಲಿ, ಇವತ್ತು stay ಕೊಟ್ಟಿರತಕ್ಕಂಥಾದ್ದು regarding the members, ನೀವು KATಗೆ ಕೊಟ್ಟಿರುವುದನ್ನು ದಯವಿಟ್ಟು refer ಮಾಡಿ. KATನಲ್ಲಿ ಏನೆಂದು ಕೊಟ್ಟಿದ್ದಾರೆ? It is not correct with anything else, ಸದಸ್ಯತ್ವ ಯಾರು ಎನ್ನುವುದರ ಬಗ್ಗೆ 11 ಜನ ನಾವು ಎಂದು ಹೋಗಿರತಕ್ಕಂಥಾದ್ದರ ಬಗ್ಗೆ ಇದೆ. ಈ society siteನಲ್ಲಿ ಹೇಗೆ construct ಮಾಡುತ್ತಿದ್ದಾರೆ? ಮಾನ್ಯ ಬಾಲಕೃಷ್ಣ ಅವರಿಗೆ ಗೊತ್ತು. West of chord roadನಲ್ಲಿರುವವರಿಗೆ ಎಲ್ಲಾ ಗೊತ್ತು. ಅಲ್ಲಿ ರೌಡಿಗಳು ಇದ್ದಾರೆ. ನೀವು CODಗೆ refer ಮಾಡಿದರೆ ಸತ್ಯಾಂಶ ಹೊರಗೆ ಬರುತ್ತದೆ. ನಿಮ್ಮ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ. ನಿಮಗೆ ವಿನಂತಿ ಮಾಡುತ್ತೇನೆ, ದಯವಿಟ್ಟು CODಗೆ referಗೆ ಮಾಡಿ. ವಾಸ್ತವಾಂಶ, ಸತ್ಯಾಂಶ ಹೊರಗಡೆ ಬರಲಿ. ಈ ರೀತಿ ಪೋಲಾಗುವುದಕ್ಕೆ ಅವಕಾಶ ಮಾಡಿಕೊಡುವುದು ಬೇಡವೆಂದು ಆಗ್ರಹಿಸುತ್ತೇನೆ

ಶ್ರೀ ಲಕ್ಷ್ಮಣ್ ಎಸ್. ಸವದಿ :- ಮಾನ್ಯ ಸದಸ್ಯರು ನಮಗೆ ನಿವೇಶನ ಸಿಕ್ಕಿಲ್ಲ, ನಮಗೆ ನ್ಯಾಯ ಸಿಗಬೇಕೆಂಬುದು ಅವರ ಮೂಲ ಪ್ರಶ್ನೆ.

ಶ್ರೀ ನೆ.ಲ. ನರೇಂದ್ರ ಬಾಬು :- ಇಲ್ಲ, ನೀವು ತಪ್ಪು ತಿಳಿದುಕೊಳ್ಳಬೇಡಿ. ನಾನು ಆ ರೀತಿ ಹೇಳಲಿಲ್ಲ.

ಶ್ರೀ ಲಕ್ಷ್ಮಣ್ ಎಸ್. ಸವದಿ :- ನಾನು ಉತ್ತರ ಹೇಳಿದ ಮೇಲೆ ತಾವು ಮತ್ತೆ clarification ಕೇಳುವಿರಂತೆ. ಅವರು ನಮಗೆ ನ್ಯಾಯ ಸಿಕ್ಕಿಲ್ಲ, ನ್ಯಾಯ ಕೊಡಿಸಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ಅದು High Courtನಲ್ಲಿ ನೋಂದಣಿಯಾಗಿರುವಂತಹ 41 ನಿವೇಶನಗಳನ್ನು ರದ್ದು ಪಡಿಸಿರುವ ಬಗ್ಗೆ ಆದೇಶವಾಗಿದೆ. ಅಲ್ಲಿ Boardನಲ್ಲಿ ಎರಡು ಗುಂಪುಗಳಾಗಿ, ಈಗಾಗಲೇ ಒಂದು ಗುಂಪು KATಗೆ ಹೋಗಿ ಅದಕ್ಕೆ ತಡೆಯಾಜ್ಞೆ ಸಿಕ್ಕಿದೆ. ಆ ತಡೆಯಾಜ್ಞೆ ತೆರವಾದ ಮೇಲೆ ನ್ಯಾಯ ಸಿಗುತ್ತದೆ ಎನ್ನುವ ಭಾವನೆ ಅವರಿಗೆ ಇರಲಿ ಎಂದು ಹೇಳುತ್ತೇನೆ. ಏಕೆಂದರೆ ಗೌರವ ನ್ಯಾಯಾಲಯ ತೀರ್ಮ ಕೊಟ್ಟಾಗ ಅದನ್ನು ನಾವು ಗೌರವಿಸಬೇಕಾಗುತ್ತದೆ. ಇದರಲ್ಲಿ CODಗೆ ಕೊಡುವಂತಹ ಪ್ರಶ್ನೆ ಉದ್ಭವ ವಾಗುವುದಿಲ್ಲ. ತಡೆಯಾಜ್ಞೆ ತೆರವಾಗಲಿ, ತೆರವಾದಮೇಲೆ ನೋಡೋಣ.

ಶ್ರೀ ಹೆಚ್.ಡಿ. ರೇವಣ್ಣ :- ಅವರು ಹೇಳುತ್ತಿರುವುದು ಕೆಲವು ಸಹಕಾರಿ ಇಲಾಖೆ ಅಧಿಕಾರಿಗಳು KATಗೆ ಕೊಡಬೇಕಾದರೆ ಇಲ್ಲದೆ ಇರುವ documents ತಿದ್ದಿ ಕೊಡುತ್ತಾರೆ.

ಶ್ರೀ ಲಕ್ಷ್ಮಣ್ ಎಸ್. ಸವದಿ :- ಬಹುಶಃ ರೇವಣ್ಣನವರು ಇದ್ದಾಗ ಅವರ ತಮ್ಮ ಪ್ರೇರಣೆಯಿಂದ ನಡೆಯುತ್ತಿರಬಹುದು, ಅದರ ಬಗ್ಗೆ ನನಗೆ ಹೆಚ್ಚು ಮಾಹಿತಿ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- . . . ಅಂತಾದ್ದು ಏನಾದರೂ ನಾನು ನನ್ನ ಜೀವನದಲ್ಲಿ ಮಾಡಿದ್ದರೆ ಬೇಕಾದರೆ ಅದನ್ನು ಸಹಕಾರ ಸಚಿವರು CBI/CODಗೆ ಕೊಡಿ. ಅವರಿಗೆ CODಗೆ ಕೊಡುವುದಕ್ಕೆ ಏಕೆ ಹೆದರಿಕೆ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- ಈ ರೀತಿಯ ಅನ್ಯಾಯದ ಬಗ್ಗೆ ಗಮನವನ್ನು ಸೆಳೆಯುತ್ತಿದ್ದೇನೆ. ಎಂಟು ಎಕರೆ ಜಮೀನು, 29-01-07ರಂದು ಆದೇಶವಾಯಿತು.

ಅಧ್ಯಕ್ಷರು :- ಗಮನ ಸೆಳೆಯುವ ಸೂಚನೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. ಈಗಾಗಲೇ ಸಾಕಷ್ಟು ಚರ್ಚೆ ಮಾಡಿದ್ದೀರಿ. ಸ್ಪಷ್ಟೀಕರಣವನ್ನು ಕೇಳಿದ್ದೀರಿ.

ಶ್ರೀ ನೆ.ಲ ನರೇಂದ್ರ ಬಾಬು :- ಅಲ್ಲಿ ಆಗಿರುವಂತಹ ಅನ್ಯಾಯವನ್ನು ನಾವು ಸರ್ಕಾರಕ್ಕೆ ತಿಳಿಸಿದ್ದು, ಇದರ ಬಗ್ಗೆ ತನಿಖೆಯಾಗಬೇಕು.

ಅಧ್ಯಕ್ಷರು :- ಸಚಿವರೇ personal ಆಗಿ inspection ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ನೆ.ಲ. ನರೇಂದ್ರ ಬಾಬು :- ಇಲ್ಲಿ ತಪ್ಪು ಮಾಹಿತಿ ಕೊಟ್ಟಿರುವುದು ಸದನದಲ್ಲಿ ರೆಕಾರ್ಡ್ ಆಗಲಿ. ಮಾನ್ಯ ಸಚಿವರು ಅಲ್ಲಿ plan ಆಗಿಲ್ಲ, construction ಆಗುತ್ತಿಲ್ಲ ಹೇಳುತ್ತಾರೆ.

ಅಧ್ಯಕ್ಷರು :- ಸಚಿವರು inspection ಮಾಡುತ್ತೇನೆಂದು ಹೇಳುತ್ತಿದ್ದಾರಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು :- ಅಲ್ಲಿ BBMPಯಿಂದ ಖಾತೆ ಮಾಡುತ್ತಿದ್ದಾರೆ. ಒಂದು ಹೇಳುತ್ತೇನೆ, ಇವತ್ತು ಏನಾದರೂ ಗೊತ್ತಾದ ಕೂಡಲೇ ಇನ್ನೊಬ್ಬ ಯಾರಾದರೂ ಬಡಪಾಯಿಗೆ ಮಾರುತ್ತಾರೆ. ಆ ಬಡಪಾಯಿ ಕೋಟ್ಯಾಂತರ ರೂಪಾಯಿ ಕೊಡುತ್ತಾನೆ. ದಯವಿಟ್ಟು ಇದನ್ನು ಮುಚ್ಚಿ ಹಾಕುವುದು ಬೇಡ. ಮಾನ್ಯ ಸಚಿವರು ಕಟ್ಟಡ ಆಗುತ್ತಿಲ್ಲವೆಂದು ಹೇಳಿರುವುದು ರೆಕಾರ್ಡ್‌ಗೆ ಹೋಗಲಿ. ಅದು ರೆಕಾರ್ಡ್‌ನಲ್ಲಿ ಇವತ್ತು ಹೋಗಿದೆ. ಕಟ್ಟಡ ಆಗಿಲ್ಲ, ಖಾತೆ ಆಗಿಲ್ಲ, ಕಂದಾಯ ಆಗಿಲ್ಲ, ಅದು cancel ಆಗಿದೆ ಎಂದು ಹೇಳಿದ್ದಾರೆ, ಬಹುಶಃ ಅದು ಸತ್ಯವೋ ಮಿತ್ಯವೋ ಎನ್ನುವುದು ಮುಂದಿನ ಸಭೆಯಲ್ಲಿ ಗೊತ್ತಾಗುತ್ತದೆ.ಅಲ್ಲಿನ ACPಯವರಿಗೆ ಕೊಟ್ಟರೂ ಕೂಡ acknowledgement ಕೊಟ್ಟಿಲ್ಲ. ನಾನು ಕೊಟ್ಟಿರುವಂತಹ ಪ್ರತಿ ಇಲ್ಲೆ ಇದೆ ಅದನ್ನು ಕೊಡುತ್ತೇನೆ. ತಾವು ನ್ಯಾಯವಾದಿಗಳಿದ್ದೀರಿ. High Courtನಿಂದ ಆದೇಶ ಕೊಟ್ಟಿದ್ದರೂ ಸಹ ಇದನ್ನು CODಗೆ refer ಮಾಡುವುದಕ್ಕೆ ಏಕೆ ಹಿಂಜರಿಯುತ್ತಿದ್ದೀರಿ. ಆ Housing Societyಗೆ Administrator ಅನ್ನು ಹಾಕಿ. ಆ Housing Societyಯನ್ನು supercede ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ಈ ಮನೆಯ ಒಬ್ಬ ಗೌರವಾನ್ವಿತ ಸದಸ್ಯ ತನ್ನ ಮತಕ್ಷೇತ್ರದಲ್ಲಿ ನಡೆದಂತಹ ಸ್ವಂತ ಅನುಭವವನ್ನು ಹೇಳುತ್ತಿದ್ದಾರೆ. ಅವರು ಹೊರಗಿನ ವಿಚಾರ ಹೇಳಿದ್ದರೆ ಆ ಮಾತು ಬೇರೆ. ಅವರು ಎರಡು option ಕೊಟ್ಟಿದ್ದಾರೆ. ಒಂದು ನೀವು ಅಲ್ಲಿ administrator ಅನ್ನು ಹಾಕಿ enquiry ಮಾಡಿ, ಇಲ್ಲ ನಿಮಗೆ ಪುರುಸೊತ್ತು ಇಲ್ಲವೆಂದರೆ CODಗೆ refer ಮಾಡಿ enquiry ಮಾಡಿಸಿ. ಇದರಲ್ಲಿ ತಾಪತ್ರಯ ಏನಿದೆ? ನೀವು ಏಕೆ ಆ Societyಯವರ side ತೆಗೆದುಕೊಳ್ಳುತ್ತಿದ್ದೀರಿ. KAT ಎಂದು ಹೇಳಿದಿರಿ, KATಯಲ್ಲಿ ಏನಿದೆ? ಇವರಿಗೆ site allot ಆಗಿರುವುದು legal or illegal ಎಂದು KATಗೆ ಹೋಗಿರಬಹುದು. ಆ society affairs ಅನ್ನು enquiry ಮಾಡಿ ಎನ್ನತಕ್ಕ ದೃಷ್ಟಿಯಿಂದ ಅವರು ಕೇಳುತ್ತಿದ್ದಾರೆ. ನೀವು ಏಕೆ ಅದಕ್ಕೆ defend ಮಾಡುತ್ತೀರಿ? What is the reason?

ಅಧ್ಯಕ್ಷರು :- ಮಂತ್ರಿಗಳೇ, ಅಲ್ಲಿ administrator ಅನ್ನು ನೇಮಕ ಮಾಡುವುದಕ್ಕೆ ಏನು ತೊಂದರೆ ಇದೆ?

ಶ್ರೀ ಲಕ್ಷ್ಮಣ ಎಸ್. ಸವದಿ :- ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ supercede ಮಾಡುವಂತಹ ಪ್ರಶ್ನೆ ಉದ್ಭವವಾಗಿಲ್ಲ. ಈಗ ಅವರ ತಕರಾರು ಇರತಕ್ಕಂಥದ್ದು ಏನೆಂದರೆ ನಿವೇಶನಗಳನ್ನು 41 ಜನರಿಗೆ merit list ಬಿಟ್ಟು ಕೊಟ್ಟಿದ್ದಾರೆಂದು ಅವರ ಹೇಳಿಕೆ ಇದೆ. Boardನಲ್ಲಿ ಎರಡು ಭಾಗವಾಗಿದೆ. Merit ಪ್ರಕಾರ ಕೊಟ್ಟಿದ್ದೇವೆಂದು ಒಂದು ಭಾಗದವರು ಹೇಳುತ್ತಾರೆ. ಇನ್ನೊಂದು ಗುಂಪಿನವರು merit ಪ್ರಕಾರ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಇದರಲ್ಲಿ ಆ society ಅನ್ನು supercede ಮಾಡುವಂತಹ ಪ್ರಶ್ನೆಯೇ ಇಲ್ಲ.

ಈಗ ಇದರಲ್ಲಿ supercede ಮಾಡುವಂಥ ಸಮಸ್ಯೆ ಈಗ ನಮ್ಮ ಮುಂದೆ ಇಲ್ಲ. ಇದರ ಬಗ್ಗೆ ಬೇಕಾದರೆ ನಾನು ಸೆಕ್ಷನ್ 64 enquiry ಅನ್ನು ಹಾಕಿಸುತ್ತೇನೆ. ಸೆಕ್ಷನ್ 64 enquiry report ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :- ಅಯಿತು. ಇನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು..

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ತಮಗೆ ಈ ಪತ್ರವನ್ನು ಕೊಡುತ್ತೇನೆ.

ಅಧ್ಯಕ್ಷರು :- ಕಳುಹಿಸಿಕೊಡಿ.

ಶ್ರೀ ನೆ.ಲ. ನರೇಂದ್ರಬಾಬು :- ತಮಗೆ ನಾನು ಈ ಪತ್ರವನ್ನು ಕಳುಹಿಸುತ್ತೇನೆ. ಸಹಕಾರ ಸಂಘದ ಸಹಾಯಕ ನಿಬಂಧಕರು police stationಗೆ ಬರೆದಿರುವ ನಾಲ್ಕನೇ ಪತ್ರವಾಗಿದೆ. ಅವರು ದಯವಿಟ್ಟು ಆಸ್ತಿಯನ್ನು ರಕ್ಷಣೆ ಮಾಡಿಯೆಂದು ಬರೆದಿರುವಂಥಾದ್ದು. ಅಲ್ಲಿಯವರೆಗೂ ಯಾವುದೇ ಕಟ್ಟಡಗಳಾಗಲಿ, ಖಾತೆ, ಕಂದಾಯವನ್ನು revoke ಮಾಡಿ BBMPಯಿಂದ Plan revoke ಮಾಡಿ, ಸತ್ಯಾಂಶ ಹೊರಗೆ ಬರಬೇಕೆಂದು ಆಗ್ರಹಿಸುತ್ತೇನೆ. ಇತ್ತೀಚೆಗೆ police stationಗೆ ಪತ್ರ ಬರೆದಿರುವ ನಾಲ್ಕನೇ ಪತ್ರ ಇದು.

ಅಧ್ಯಕ್ಷರು :- ಅಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಹಾಗೆ ಅಲ್ಲಿ ಎರಡು ಗುಂಪುಗಳಾಗಿದೆಯೆಂದರೆ, administrator is necessary.

ಅಧ್ಯಕ್ಷರು :- ಅದಕ್ಕೆ 64 enquiry start ಮಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈಗ ಒಬ್ಬ ಶಾಸಕರ ಮಾತಿಗೆ ಗೌರವವನ್ನು ಕೊಟ್ಟು, ನಾನು ತಕ್ಷಣ ಮಾಡುತ್ತೇನ್ನುವಂಥಾದ್ದು ಬೇರೆ. ನಾನು enquiry ಮಾಡುತ್ತೇನೆ, ನೋಡುತ್ತೇನೆಂದರೆ ಯಾಥಾ ಪ್ರಕಾರ ಬೇರೆಯವರಿಗೆ ಹೇಳಿದ ಹಾಗೆ, ಅಥವಾ ಯಾವುದೋ ಒಂದು case ಬಗ್ಗೆ plead ಮಾಡಿದ ಹಾಗೆ ಆಗುತ್ತದೆ. ಅವರ ಸ್ವಂತ ಅನುಭವ, ಅವರ ಸ್ವಂತ ಮತಕ್ಷೇತ್ರದಲ್ಲಿ, ಅವರ ತಾಯಿ ಹೆಸರಿನಲ್ಲಿರುವಂಥಾದ್ದರಲ್ಲೆ, ಈ ರೀತಿ ಆಗಿದೆಯೆಂದರೆ ಬೇರೆಯವರಿಗೆ ಇನ್ನು ಹೇಗೆ ನ್ಯಾಯ ಸಿಗುತ್ತದೆ? This is too much.

ಅಧ್ಯಕ್ಷರು :- ಅಯಿತು, ಇನ್ನು ಮಾನ್ಯ ವಿರೋಧಪಕ್ಷದ ನಾಯಕರ ಗಮನ ಸೆಳೆಯುವ ಸೂಚನೆ.

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ನನ್ನ ಒಂದು ಮನವಿ ಏನೆಂದರೆ, ಪೊಲೀಸ್ ಇಲಾಖೆಗೆ ಸೂಚನೆಯನ್ನು ಕೊಡಿ. ಅಲ್ಲಿ ಯಾವುದೇ ಕಟ್ಟಡ ಆಗಬಾರದು. ತಾವು ಬೆಂಗಳೂರು ಮಹಾ ನಗರ ಪಾಲಿಕೆಯ ಅಧಿಕಾರಿಗಳಿಗೆ ತಿಳಿಸಿ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನೀವು direction ಕೊಡಿ, 64 enquiry ಆಗುವವರೆಗೆ ಅಲ್ಲಿ ಯಾವುದೇ ಕಟ್ಟಡವಾಗಬಾರದೆಂದು ಹೇಳಿ.

ಅಧ್ಯಕ್ಷರು :- ಮಾನ್ಯ ಮಂತ್ರಿಗಳೆ, ಕಾನೂನು ಪ್ರಕಾರ compliant ಕೊಟ್ಟು ಏನು ಮಾಡುವುದಕ್ಕೆ ಸಾಧ್ಯವಿದೆಯೋ, ಅದನ್ನು ಮಾಡಿ. ಮಾನ್ಯ ಲಕ್ಷ್ಮಣ್ ಸವದಿಯವರೆ, ಹೇಳಿ.

ಶ್ರೀ ಲಕ್ಷ್ಮಣ್ ಎಸ್ ಸವದಿ :- ತಾವು ಕಳುಹಿಸಿರುವ ಬಗ್ಗೆ ನಾನು ಪೊಲೀಸ್ ಇಲಾಖೆಗೆ ಪತ್ರವನ್ನು ಬರೆಯುತ್ತೇನೆ. ಅಲ್ಲಿ ಇನ್ನು ಮುಂದೆ ಕಟ್ಟಡವಾಗದ ಹಾಗೆ ನೋಡಿಕೊಳ್ಳುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ.

ಅಧ್ಯಕ್ಷರು :- ಅಯಿತು, ಮಾನ್ಯ ವಿರೋಧಪಕ್ಷದ ನಾಯಕರೆ, ಈಗ ಮಾನ್ಯ ಗೃಹ ಸಚಿವರು ಬಂದಿದ್ದಾರೆ. ತಾವು ಗಮನವನ್ನು ಸೆಳೆಯಬಹುದು.